ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) **ಮತ್ತು ಆ)** ಬೆಂಗಳೂರಿನಿಂದ ರಾಮನಗರ, ಮಂಡ್ಯ, ಮೈಸೂರು, ಹುಣಸೂರು ಹಾಗೂ ಮಡಿಕೇರಿ ಮುಖಾಂತರ ಮಂಗಳೂರು ಜಿಲ್ಲೆಯಲ್ಲಿರುವ ಬಂಟ್ವಾಳದವರೆಗೆ ಒಟ್ಟು 376.00 ಕಿಮಿ ಉದ್ದದ ರಸ್ತೆಯನ್ನು, ರಾಷ್ಟ್ರೀಯ ಹೆದ್ದಾರಿ 275 ಎಂದು ದಿನಾಂಕ 04.03.2014 ರಂದು ಕೇಂದ್ರ ಸರ್ಕಾರವು ಘೋಷಿಸಿರುತ್ತದೆ;

2004 ರಿಂದ 2007ರವರೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಈ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲಾಗಿದ್ದು; ಕೇಂದ್ರ ಭೂಸಾರಿಗೆ ಮಂತ್ರಾಲಯದ ಅನುಮೋದನೆಯಂತೆ, 4/6 ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ವಿಸ್ತೃತ ಯೋಜನಾ ವರದಿ ತಯಾರಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಇ) **ಯಿಂದ ಉ) ವರೆಗೆ** ಯೋಜನಾ ವರದಿಯು ತಯಾರದ ನಂತರವೇ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗುವುದು.

ಸೌರ ವಿದ್ಯುತ್ ಘಟಕ ಸ್ಥಾಪನೆ

1811(1999); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದಲ್ಲಿ ಸೌರ ವಿದ್ಯುತ್ ಘಟಕ ಸ್ಥಾಪಿಸಲು ಉದ್ದೇಶಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಎಲ್ಲೆಲ್ಲಿ ಇಂತಹ ಘಟಕಗಳನ್ನು ಸ್ಥಾಪಿಸಲುದ್ದೇಶಿಸಲಾಗಿದೆ. (ವಿವರಗಳನ್ನು ಒದಗಿಸುವುದು);

ಆ) ಈ ನಿಟ್ಟಿನಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಕೈಗೊಂಡ ಕ್ರಮಗಳೇನು (ವಿವರ ನೀಡುವುದು);

ಇ) ಇದಕ್ಕಾಗಿ ಸೌರ ವಿದ್ಯುತ್ ಉತ್ಪಾದನಾ ಘಟಕಗಳಿಗೆ ವಿಶೇಷ ಸೌಲಭ್ಯಗಳನ್ನು, ವಿನಾಯಿತಿಗಳನ್ನು ನೀಡಿದೆಯೇ (ಮಾಹಿತಿ ನೀಡುವುದು);

ಈ) ಇದು ಯಾವ ಅವಧಿಯವರೆಗೂ ಚಾಲ್ತಿಯಲ್ಲಿರುತ್ತದೆ; ಇದಕ್ಕೆ ವಿಧಿಸಿರುವ ಮಾನದಂಡಗಳೇನು; ವಿನಾಯಿತಿಯನ್ನು ಎಷ್ಟು ಪ್ರಮಾಣದಲ್ಲಿ ನೀಡಲಾಗುವುದು;

ಉ) ಇದಲ್ಲದೆ ಸ್ವಂತಕ್ಕೆ ಬಳಸುವ ಸೌರ ವಿದ್ಯುತ್ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸಿದ ವಿದ್ಯುತ್‌ಗೂ ಇದು ಅನ್ವಯವಾಗುವುದೇ; ಸದರಿ ಅವಧಿ ನಂತರವೂ ಪ್ರಯೋಜನ ವಿಸ್ತರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ತಿಳಿಸುವುದು?

ಶ್ರೀ ಡಿ.ಕೆ. ಶಿವಕುಮಾರ (ಇಂಧನ ಸಚಿವರು)

ಅ) ರಾಜ್ಯದಲ್ಲಿ ಸೌರ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ 2011 ರಲ್ಲಿಯೇ ಸೌರ ನೀತಿ 2011–16ನ್ನು ಜಾರಿಗೆ ತರಲಾಗಿತ್ತು. ಈ ಕ್ಷೇತ್ರದಲ್ಲಾಗುತ್ತಿರುವ ಬೆಳವಣಿಗೆಯನ್ನು ಮನಗಂಡು ಈ ನೀತಿಯನ್ನು ಪರಿಷ್ಕರಿಸಿ ಸೌರ ನೀತಿ 2014–21ನ್ನು ಜಾರಿಗೆ ತರಲಾಗಿದೆ. ಈ ನೀತಿ ಅವಧಿಯಲ್ಲಿ ರಾಜ್ಯದಲ್ಲಿ ಸುಮಾರು 2000 ಮೆ.ವ್ಯಾ. ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ.

ಸೌರ ವಿದ್ಯುತ್ ಸ್ಥಾವರಗಳನ್ನು ರಾಜ್ಯದ ಯಾವುದೇ ಭಾಗದಲ್ಲಿ ನೆರಳು ರಹಿತ ಸಮತಟ್ಟಾದ ಭೂಮಿಯ ಲಭ್ಯತೆಯನ್ನು ಅವಲಂಬಿಸಿ ಅಭಿವೃದ್ಧಿದಾರರು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ.

ಆ) ಸೌರ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಕರ್ನಾಟಕ ನಿಯಂತ್ರಣ ಆಯೋಗವು ಒಟ್ಟು ವಿದ್ಯುತ್ ಖರೀದಿಯ 0.25% ರಷ್ಟು ವಿದ್ಯುತನ್ನು ಸೌರ ಘಟಕಗಳಿಂದ ಖರೀದಿಸಬೇಕೆಂದು ಆದೇಶಿಸಿದೆ. ಸೌರ ಘಟಕಗಳಿಂದ ಖರೀದಿಸುವ ವಿದ್ಯುತ್ತಿನ ದರವನ್ನು ನಿಗದಿಪಡಿಸಿದೆ. ಸೌರ ಸ್ಥಾವರಗಳಿಂದ ಖರೀದಿಸುವ ವಿದ್ಯುತ್ತಿಗೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಶುಲ್ಕದಿಂದ ವಿನಾಯಿತಿಯನ್ನು ನೀಡಿದೆ.

ಇ) ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಎಂಎನ್ಆರ್ಇ ನೀಡುವ excise ಮತ್ತು customs ಸುಂಕ ವಿನಾಯಿತಿಯನ್ನು ವಿಸ್ತರಿಸಲಾಗುವುದು. ಇದರೊಂದಿಗೆ ರಾಜ್ಯ ಸರ್ಕಾರದ ಸೌರನೀತಿ 2014–21 ಮತ್ತು ಕೈಗಾರಿಕಾ ನೀತಿಯಂತೆ ಕೈಗಾರಿಕೆಗಳಿಗೆ ಸಿಗುವ ಸೌಲಭ್ಯಗಳೂ ದೊರೆಯಲ್ಲಿದೆ.

ಈ) ಈ ಸೌಲಭ್ಯಗಳು ಕಾಲಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳಂತೆ ಬದಲಾಗುವ ಸಾಧ್ಯತೆಯಿದೆ.

ಉ) ಈ ಸೌಲಭ್ಯಗಳು ಸ್ವಂತಕ್ಕೆ ಬಳಸುವ ಅಂದರೆ ಕ್ಯಾಪ್‌ಟೀವ್ ಉತ್ಪಾದನಾ ಘಟಕಗಳಿಗೆ ಅನ್ವಯವಾಗುತ್ತದೆ ಹಾಗೂ ನವೀಕರಿಸಬಹುದಾದ ಇತರೆ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುತ್ ಘಟಕಗಳನ್ನು ಅನುಷ್ಠಾನಗೊಳಿಸಲು ಬೇಕಾಗುವ ಯಂತ್ರೋಪಕರಣಗಳಿಗೆ Excise duty exemption ಹಾಗೂ ಪ್ರವೇಶ ತೆರಿಗೆ ವಿನಾಯಿತಿ ಸೌಲಭ್ಯಗಳಿರುತ್ತದೆ. ಇದರೊಂದಿಗೆ ರಾಜ್ಯ ಸರ್ಕಾರದ ಸೌರನೀತಿ ಮತ್ತು ಕೈಗಾರಿಕಾ ನೀತಿಯಂತೆ ಕೈಗಾರಿಕೆಗಳಿಗೆ ಸಿಗುವ ಸೌಲಭ್ಯಗಳೂ ದೊರೆಯಲಿದೆ. ಕಾಲಕಾಲಕ್ಕೆ ರಾಜ್ಯದ ನವೀಕರಿಸಬಹುದಾದ ಇಂಧನ ನೀತಿ ಆಧಾರದ ಮೇಲೆ ಪ್ರಯೋಜನವನ್ನು ವಿಸ್ತರಿಸಲಾಗುವುದು.

ಅಭಿವೃದ್ಧಿ ಕಾಮಗಾರಿಗಳು

1812(1983); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ಮತಕ್ಷೇತ್ರದಲ್ಲಿ 2014–15ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು (ವಿವರ ನೀಡುವುದು);

ಆ) ಈ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು (ಕಾಮಗಾರಿವಾರು ವಿವರ ನೀಡುವುದು);

ಇ) ಹಣ ಬಿಡುಗಡೆ ಮಾಡಿರದಿದ್ದರೆ ಕಾರಣವೇನು?